ಆಯ್ದ ಔಷಧೀಯ ಗಿಡಮೂಲಿಕೆಗಳ
ರಾಷ್ಟ್ರೀಯ ಅಭಿಯಾನ

# ಅಶ್ವಗಂಧ

## "ಒಂದು ಆರೋಗ್ಯವರ್ಧಕ ಸಸ್ಯ"






ಪ್ರಾದೇಶಿಕ ಹಾಗೂ ಸಹಾಯಪ್ರದಾನ ಕೇಂದ್ರ (ದಕ್ಷಿಣ ವಲಯ)
ರಾಷ್ಟ್ರೀಯ ಔಷಧೀಯ ಸಸ್ಯಗಳ ಮಂಡಳಿ
ಕೇರಳ ಅರಣ್ಯ ಸಂಶೋಧನಾ ಸಂಸ್ಥೆ
ಪೀಚಿ ೬೮೦೬೫೩, ಕೇರಳ ರಾಜ್ಯ, ಭಾರತ

## ಮುನ್ನುಡಿ



ಅಶ್ವಗಂಧ ಮತ್ತು ಭಾರತದ ಜಿನ್‌ಸೆಂಗ್ ಎಂದು ವ್ಯಾಪಾರರಂಗದಲ್ಲಿ ಕರೆಯಲ್ಪಡುವ ಈ ಪ್ರಮುಖ ಔಷಧೀಯ ಸಸ್ಯದ ಶಾಸ್ತ್ರೀಯ ನಾಮ ವಿಥಾನಿಯಾ ಸೋಮ್ನಿಫೆರಾ. ಸುಮಾರು ಐದು ಸಾವಿರ ವರ್ಷಗಳ ಹಿಂದಿನಿಂದಲೂ ಅಶ್ವಗಂಧವನ್ನು ನರಗಳ ಉತ್ತೇಜನಕ್ಕಾಗಿ ಆಯುರ್ವೇದ ಪದ್ಧತಿಯಲ್ಲಿ ಬಳಸಿಕೊಂಡು ಬರಲಾಗಿದೆ. ಚರಕ ಸಂಹಿತೆಯಲ್ಲಿ 'ಕುದುರೆಯ ವಾಸನೆಯಿರುವ ಈ ಸಸ್ಯವು ಸೇವಿಸುವವರ ಶಕ್ತಿಯನ್ನು ವರ್ಧಿಸಬಲ್ಲದು' ಎಂದು ಉಲ್ಲೇಖಿಸಲಾಗಿದೆ. ನೆನಪಿನ ಶಕ್ತಿಯ ಕೊರತೆಯಿರುವ ಮಕ್ಕಳಿಗೆ ಹಾಗೂ ಸ್ಮರಣ ಶಕ್ತಿಯ ನಷ್ಟದ ಲಕ್ಷಣಗಳಿರುವ ವಯಸ್ಕರಿಗೆ ಅರಿವಿನ ಉತ್ತೇಜಕವಾಗಿ, ನರಗಳ ಅವನತಿಯಂತಹಾ ಸಮಸ್ಯೆಗಳನ್ನು ತಡೆಗಟ್ಟುವುದಕ್ಕೆ ಅಶ್ವಗಂಧವನ್ನು ಉಪಯೋಗಿಸಲಾಗುವುದು. ಆಸ್ತಮಾ, ಶೀತ ಮತ್ತು ಕೆಮ್ಮು, ಮಧುಮೇಹ, ಅಪಸ್ಮಾರ, ಕುಷ್ಠ, ಸ್ತ್ರೀಯರ ಲೈಂಗಿಕ ಅಪಸಾಮಾನ್ಯತೆ, ಪುರುಷರ ಬಂಜೆತನ, ಅಸ್ಥಿಸಂಧಿವಾತ, ನರಶೂಲೆ ಮತ್ತು ಉರಿಯೂತ ಹೀಗೆ ಹತ್ತು-ಹಲವಾರು ರೋಗ-ರುಜಿನಗಳನ್ನು ಹತೋಟಿಗೆ ತರಲು ಅಶ್ವಗಂಧವು ಪ್ರಯೋಜನಕಾರಿ. ಅಶ್ವಗಂಧದ ಎಲೆಗಳು ಕಹಿಯಾಗಿದ್ದು ಅವುಗಳನ್ನು ಜ್ವರ ಮತ್ತು ನೋವಿನ ಊತವನ್ನು ಚಿಕಿತ್ಸೆ ಮಾಡಲು ಬಳಸಲಾಗುತ್ತದೆ. ಈ ಗಿಡದ ಹೂವನ್ನು ಮೂತ್ರವರ್ಧಕವಾಗಿಯೂ ಮತ್ತು ಕಾಮೋತ್ತೇಜಕವಾಗಿಯೂ ಹಾಗೂ ಬೀಜಗಳನ್ನು ಹೊಟ್ಟೆಹುಳಗಳನ್ನು ಶಮನಗೊಳಿಸಲು ಉಪಯೋಗಿಸಲಾಗುತ್ತದೆ.

ಅಶ್ವಗಂಧವು ಸುಮಾರು 30 ರಿಂದ 150 ಸೆಂ.ಮೀ ಎತ್ತರ ಬೆಳೆಯುವ, ಒಂದರಿಂದ ಮೂರು ವರ್ಷ ಆಯಸ್ಸು ಹೊಂದಿರುವ ಪೊದೆಸಸ್ಯವಾಗಿದ್ದು, ಬೂದುಬಣ್ಣದ ಕಾಂಡ ಹಾಗೂ ರೆಂಬೆಗಳನ್ನು ಹೊಂದಿದ್ದು ಕುದುರೆಯ ಮೂತ್ರದಂತಹ ಕಟುವಾಸನೆಯನ್ನು ಸೂಸುತ್ತದೆ. ಗಿಡದ ಹೆಚ್ಚು-ಕಡಿಮೆ ಎಲ್ಲ ಭಾಗಗಳು ಬೂದು ಬಣ್ಣದಿಂದ ಕೂಡಿದ ಸಣ್ಣ ರೋಮಗಳಿಂದ ಆವೃತ್ತವಾಗಿರುತ್ತವೆ. ಎಲೆಗಳು 3 ರಿಂದ 8 ಸೆಂ.ಮೀ ಉದ್ದ ಮತ್ತು 2 ರಿಂದ 5 ಸೆಂ.ಮೀ. ಅಗಲವಿದ್ದು ಎಲೆಯಂಚು ಸ್ವಲ್ಪ ಅಲೆ-ಅಲೆಯಾಗಿರುತ್ತವೆ. ಹಸಿರು ಬಣ್ಣದ ಚಿಕ್ಕ ಹೂಗಳು ಪುಟ್ಟ ಪುಟ್ಟ ಗೊಂಚಲುಗಳಲ್ಲಿ ಕಾಂಡದ ಕಂಕಳುಗಳಲ್ಲಿ ಬಿಡುತ್ತವೆ. ಮಾಗಿದ ಹಣ್ಣುಗಳ ಬಣ್ಣ ಕಿತ್ತಳೆ-ಹಳದಿ. ಬೀಜಗಳು ಮೂತ್ರಪಿಂಡಾಕಾರ (ವೃಕ್ಕಾಕಾರ)ದಲ್ಲಿರುತ್ತವೆ. ಬೇರುಗಳು ಉದ್ದವಾಗಿ ಗೆಡ್ಡೆಯಂತಿರುತ್ತವೆ.

## ಬೇಡಿಕೆ

ನಮ್ಮ ದೇಶದಲ್ಲಿ, ಆಯುರ್ವೇದ ಔಷಧ ತಯಾರಿಕ ಘಟಕಗಳಿಂದ ಒಂದು ವರ್ಷಕ್ಕೆ ಸುಮಾರು 7,000 ಟನ್ ಅಶ್ವಗಂಧದ ಒಣ ಬೇರಿನ ಬೇಡಿಕೆಯಿದೆಯೆಂದು ತಿಳಿದುಬಂದಿದೆ. ಆದರೆ, ಸದ್ಯಕ್ಕೆ ಲಭ್ಯವಿರುವ ಪ್ರಮಾಣ ವರ್ಷಕ್ಕೆ ಕೇವಲ 1,500 ಟನ್‌ಗಳು ಮಾತ್ರ. ಆದುದರಿಂದ, ಅಶ್ವಗಂಧದ ಕೃಷಿಯನ್ನು ಆರಂಭಿಸಲು, ರೈತರಿಗೆ ಕೃಷಿ-ವಿಧಾನ, ಬೆಳೆ ಸಂರಕ್ಷಣೆ, ಕಟಾವಿನ ನಂತರದ ಸಂಸ್ಕರಣಾ ರೀತಿ ಮತ್ತು ಆದಾಯ-ವ್ಯಯದ ಬಗ್ಗೆ ಸಮಗ್ರ ಮಾಹಿತಿಯನ್ನು ನೀಡುವುದರ ಅಗತ್ಯವಿದೆ. ಈ ಉದ್ದೇಶದಿಂದ, ಅಶ್ವಗಂಧದ ಬಗ್ಗೆ ವೈಜ್ಞಾನಿಕವಾಗಿ ಮೌಲ್ಯೀಕರಿಸಿದ ಕೃಷಿ-ತಂತ್ರಜ್ಞಾನ ಮತ್ತು ಅರ್ಥಶಾಸ್ತ್ರವನ್ನು ಈ ಕಿರು ಹೊತ್ತಿಗೆಯಲ್ಲಿ ನೀಡಲಾಗಿದೆ.

## ಕೃಷಿ ವಿಧಾನ

ಅಶ್ವಗಂಧವು ಒಣ ಪ್ರದೇಶಗಳಲ್ಲಿ ಕೃಷಿ ಮಾಡಲು ಸೂಕ್ತವಾದ ಬೆಳೆ. ಸರಾಸರಿ 600 ರಿಂದ 750 ಮಿ.ಮಿ.ನಷ್ಟು ವಾರ್ಷಿಕ ಮಳೆಯನ್ನು ಪಡೆಯುವ, 14 ರಿಂದ 42 ಡಿಗ್ರಿ ಸೆಂಟಿಗ್ರೇಡ್‌ನಷ್ಟು ವಾತಾವರಣದ ವಾರ್ಷಿಕ ತಾಪಮಾನವಿರುವ, ಜೇಡಿಮಿಶ್ರಿತ ಕಪ್ಪು ಸಡಿಲ ಹಾಗೂ ಕ್ಷಾರೀಯ (ಪಿ.ಎಚ್. 7.5–8.0) ಮಣ್ಣನ್ನು ಹೊಂದಿರುವ ಭೂಮಿಯಲ್ಲಿ ಅಶ್ವಗಂಧವು ಚೆನ್ನಾಗಿ ಬೆಳೆಯುತ್ತದೆ. ಇದು ಅಲ್ಪಾವಧಿ (ಬೆಳೆ ಅವಧಿ 4 ರಿಂದ 4.5 ತಿಂಗಳುಗಳು) ಮತ್ತು ಮುಂಗಾರು ಬೆಳೆಯಾಗಿದ್ದು, ಚಳಿಗಾಲದ ಕೊನೆಯಲ್ಲಿ ಮಳೆ ಬಂದರೆ ಬೇರುಗಳು ಚೆನ್ನಾಗಿ

ಬೆಳೆಯುತ್ತವೆ. ಹೆಚ್ಚು ಉದ್ದವೂ ಮತ್ತು ಸುಪುಷ್ಟವಾಗಿಯೂ ಇರುವ ಗುಣಮಟ್ಟದ ಬೇರುಗಳು ಬೆಳೆಯಲು ಸೂಕ್ತವಾಗುವಂತೆ ಕೃಷಿ ಭೂಮಿಯನ್ನು ಸಿದ್ಧಪಡಿಸಿಕೊಳ್ಳಬೇಕು. ಮುಂಗಾರಿನ ಮೊದಲ ಮಳೆ ಬಿದ್ದ ನಂತರ ಭೂಮಿಯನ್ನು ಉತ್ತು ಹೆಂಟೆ ಒಡೆದು ಮಣ್ಣನ್ನು ಮಟ್ಟಸಗೊಳಿಸಬೇಕು.

ಅಶ್ವಗಂಧ ಕೃಷಿಯಲ್ಲಿ, ಬೀಜ ಬಿತ್ತನೆ ಹಾಗೂ ಸಸಿಗಳನ್ನು ನೆಡುವ ಪದ್ಧತಿಗಳೆರಡೂ ರೂಢಿಯಲ್ಲಿವೆ. ಅಶ್ವಗಂಧದ ಬೀಜಗಳನ್ನು ಅಧಿಕ ಕಾಲ ಶೇಖರಿಸಿಟ್ಟರೆ ಅವುಗಳ ಮೊಳಕೆ ಬರುವ ಶಕ್ತಿ ಕುಂಠಿತವಾಗುತ್ತದೆ. ಆದುದರಿಂದ, 5–6 ಮಾಸಗಳ ಹಿಂದೆ ಗಿಡಗಳಿಂದ ಶೇಖರಿಸಿರುವ ಬೀಜಗಳನ್ನು ಬಳಸಬೇಕು. ಸುಮಾರು 3.5 ರಿಂದ 4.25 ಲಕ್ಷ ಬೀಜಗಳ ಒಟ್ಟು ತೂಕವು ಒಂದು ಕೆ.ಜಿ. ಇರುತ್ತದೆ. ಮಳೆಯಾಶ್ರಿತ ಪ್ರದೇಶಗಳಲ್ಲಿ ಬಿತ್ತನೆ ಮಾಡಲು ಹೆಕ್ಟೇರಿಗೆ ಸುಮಾರು 15 ಕೆ.ಜಿ. ಅಶ್ವಗಂಧದ ಬೀಜಗಳು ಬೇಕಾಗುತ್ತವೆ. ಅಗಸ್ಟ್ ಮಾಸದ 2ನೇ ಅಥವಾ 3ನೇ ವಾರದಲ್ಲಿ ಬಿತ್ತನೆ ಮಾಡಬೇಕು. ಆ ಸಮಯದಲ್ಲಿ ಮಳೆ ಹೆಚ್ಚಿದ್ದರೆ ಬಿತ್ತನೆ ಮಾಡುವುದನ್ನು ಸೆಪ್ಟೆಂಬರ್ ಮಾಸಕ್ಕೆ ಮುಂದೂಡಬಹುದು. ಬೀಜಗಳ ಮೊಳಕೆ ಪ್ರಮಾಣ 80% ವಾಗಿರುತ್ತದೆ. ಇತ್ತೀಚಿನ ದಿನಗಳಲ್ಲಿ, ರೈತರು ಸಾಲು ಬಿತ್ತನೆ ಮತ್ತು ಏರಿಗಳನ್ನು ಮಾಡಿ ಅವುಗಳ ಮೇಲೆ ಸಾಲು ಬಿತ್ತನೆ ಮಾಡುವ ಕ್ರಮಗಳನ್ನು ಪಾಲಿಸುತ್ತಿದ್ದಾರೆ. ಏಕೆಂದರೆ, ಈ ಕೃಷಿ ರೀತಿಗಳಿಂದ ಉತ್ಕೃಷ್ಠವಾದ ಬೇರುಗಳು ಹೆಚ್ಚಿನ ಪ್ರಮಾಣದಲ್ಲಿ ಲಭ್ಯವಾಗುತ್ತವೆ.

ಅಶ್ವಗಂಧದ ಸಸಿಗಳನ್ನು ಮಡಿಗಳಲ್ಲಿ ಬೆಳೆಸಿ ನಂತರ ಕಿತ್ತು ಕೃಷಿ ಭೂಮಿಯಲ್ಲಿ ನೆಡುವ ವಿಧಾನವೂ ಇದೆ. ಸಸಿ ಮಡಿಗಳನ್ನು ಮಾಡಿಕೊಂಡು, ಬೀಜಗಳನ್ನು ಸುಮಾರು 5 ಸೆಂ.ಮೀ ಅಂತರದಲ್ಲಿ ಬಿತ್ತಿ ಅವುಗಳ ಮೇಲೆ ತೆಳುವಾಗಿ ಮಣ್ಣನ್ನು ಹರಡಬೇಕು. ನಂತರ, ಲಘುವಾಗಿ ನೀರನ್ನುಣಿಸುವುದರಿಂದ ಬೀಜಗಳು ಉತ್ತಮ ರೀತಿಯಲ್ಲಿ 6–7 ದಿನಗಳಲ್ಲಿ ಮೊಳಕೆಯೊಡೆಯುತ್ತವೆ. ಸುಮಾರು 6 ವಾರ ಪ್ರಾಯ ಮತ್ತು ಸಾಕಷ್ಟು ಎತ್ತರವಿರುವ ಸಸಿಗಳನ್ನು ಮಡಿಗಳಿಂದ ಕಿತ್ತು ಜುಲೈ–ಆಗಸ್ಟ್ ಮಾಸಗಳಲ್ಲಿ 15 ಸೆಂ.ಮೀ. x 15 ಸೆಂ.ಮೀ ಅಂತರದಲ್ಲಿ ಗದ್ದೆಗಳಲ್ಲಿ ನೆಡಬಹುದು. ಒಂದು ಹೆಕ್ಟೇರ್ ಭೂಮಿಯಲ್ಲಿ ನೆಡಲು ಬೇಕಾದ ಸಸಿಗಳನ್ನು ಬೆಳೆಸಲು ಸುಮಾರು 5 ಕೆ.ಜಿ. ಅಶ್ವಗಂಧದ ಬೀಜಗಳು ಬೇಕಾಗುತ್ತವೆ.

ಬಿತ್ತನೆ ಮಾಡಿದ ಗದ್ದೆಯಲ್ಲಿ, ಒಂದು ಹೆಕ್ಟೇರ್‌ಗೆ ಸುಮಾರು 3 ರಿಂದ 6 ಲಕ್ಷ ಉತ್ತಮ ಗುಣಮಟ್ಟದ ಗಿಡಗಳು ಇರುವಂತೆ ನೋಡಿಕೊಂಡು ಹೆಚ್ಚಿನ ಗಿಡಗಳನ್ನು ಕೈಯಲ್ಲಿ ಕಿತ್ತು ಕಳೆಯಬೇಕು. ಕಳೆ ನಿಯಂತ್ರಣ ಮತ್ತು ಮಣ್ಣಿನ ತೇವಾಂಶ ಸಂರಕ್ಷಣೆಗೆ ಹಿಂದಿನ ಬೆಳೆಗಳ ಕೂಳೆಗಳನ್ನು ಬಳಸಿ ತಯಾರಿಸಿದ ಸಾವಯುವ ಗೊಬ್ಬರದ ಮುಚ್ಚುಗೆ ಕೊಡಬಹುದು. ಅತಿಯಾದ ಮಳೆ ಅಥವಾ ನೀರುಣಿಸುವುದರಿಂದ ಅಶ್ವಗಂಧದ ಬೆಳೆ ಹಾನಿಗೊಳಗಾಗುತ್ತದೆ. ಆದುದರಿಂದ, ಅಗತ್ಯವಿದ್ದರೆ ಮಾತ್ರ ಗಿಡಗಳು ಬಾಡದಂತೆ ನೋಡಿಕೊಳ್ಳಲು ಒಂದೆರಡು ಬಾರಿ ನೀರುಣಿಸಬೇಕು. ಅಶ್ವಗಂಧ ಬೆಳೆಗೆ ಸಾಮಾನ್ಯವಾಗಿ ಕ್ರಿಮಿ–ಕೀಟಗಳ ಮತ್ತು ರೋಗಗಳ ಬಾಧೆಯುಂಟಾಗುವುದಿಲ್ಲ. ಆದರೂ ಕೆಲವು ಪ್ರದೇಶಗಳಲ್ಲಿ, ಗಿಡಹೇನುಗಳು, ಹಡ್ಡಾ ಜೀರುಂಡೆಗಳಂತಹಾ ಕೀಟಗಳು, ಮೊಳಕೆ ಮತ್ತು ಎಲೆ ಕೊಳೆಯುವಿಕೆಯಂತಹಾ ರೋಗಗಳು ಬಾಧಿಸಬಹುದು. ಕೀಟಗಳನ್ನು ನಿಯಂತ್ರಿಸಲು ಬೇವು, ಚಿತ್ರಮೂಲ, ದತೂರ ಮತ್ತು ಗೋಮೂತ್ರವನ್ನು ಬಳಸಿ ತಯಾರಿಸಿದ ಜೈವಿಕ ಕೀಟನಾಶಕಗಳನ್ನು ಬಳಸಬಹುದು. ಬೇವಿನ ಹಿಂಡಿಯನ್ನು ಮಣ್ಣಿಗೆ ಸೇರಿಸುವುದರಿಂದ ರೋಗಗಳನ್ನು ನಿಯಂತ್ರಿಸಬಹುದು.



## ಕೊಯ್ಲು


ಅಶ್ವಗಂಧದ ಗಿಡಗಳು ಡಿಸೆಂಬರ್ ತಿಂಗಳಿನಿಂದಲೇ ಹೂ ಮತ್ತು ಹಣ್ಣುಗಳನ್ನು ಬಿಡಲು ಆರಂಭಿಸುತ್ತವೆ. ಚೆನ್ನಾಗಿ ಮಾಗಿದ ಹಣ್ಣುಗಳನ್ನು ಶೇಖರಿಸಿ ಅವುಗಳಿಂದ ಬೀಜಗಳನ್ನು ಬಿಡಿಸಿ ಸಂಗ್ರಹಿಸಿಟ್ಟುಕೊಂಡರೆ ಮುಂದಿನ ಜುಲೈ-ಅಗಸ್ಟ್‌ನಲ್ಲಿ ಬಿತ್ತನೆಗೆ ಬಳಸಿಕೊಳ್ಳಬಹುದು. ಗಿಡಮೂಲಿಕೆ ಉದ್ಯಮದಲ್ಲಿ ಅಶ್ವಗಂಧದ ಬೇರುಗಳನ್ನು ಪ್ರಧಾನವಾಗಿ ಬಳಸಲಾಗುತ್ತದೆ. ಚೆನ್ನಾಗಿ ಬೆಳೆದು ಪುಷ್ಟಿಯಾಗಿರುವ ಬೇರುಗಳಿಗೆ ಬೇಡಿಕೆ ಹೆಚ್ಚಿರುತ್ತದೆ. ಅಶ್ವಗಂಧದ ಗಿಡಗಳನ್ನು ನೆಟ್ಟು 16 ರಿಂದ 18 ವಾರಗಳಾಗುವ ವೇಳೆಗೆ, ಅಂದರೆ ಜನವರಿ-ಫೆಬ್ರವರಿ ಮಾಸಗಳಲ್ಲಿ ಎಲೆಗಳು ಒಣಗಲು ಪ್ರಾರಂಭಿಸುತ್ತವೆ ಮತ್ತು ಹಣ್ಣುಗಳು ಹಳದಿ-ಕೆಂಪು ಬಣ್ಣಕ್ಕೆ ತಿರುಗುತ್ತವೆ. ಆಗ, ಗಿಡಗಳನ್ನು ಬೇರು ಸಮೇತ ಕಿತ್ತು, ಬೇರನ್ನು ಬೇರ್ಪಡಿಸಿಕೊಳ್ಳಲು ಸೂಕ್ತ ಸಮಯ. ಗಿಡಗಳನ್ನು ಶುಷ್ಕ ಹವಾಮಾನ ಇರುವಾಗ ಕೀಳಬೇಕು; ಮಳೆ ಅಥವಾ ಇಬ್ಬನಿಯಿದ್ದ ದಿನಗಳಲ್ಲಿ ಕೊಯ್ಲು ಮಾಡಬಾರದು. ಗಿಡಗಳನ್ನು ಕೀಳುವ ಸಮಯದಲ್ಲಿ ಬೇರುಗಳಿಗೆ ಹಾನಿಯಾಗದಂತೆ ನೋಡಿಕೊಳ್ಳಲು ಮಣ್ಣಿನಲ್ಲಿ ಸಾಕಷ್ಟು ತೇವಾಂಶವಿದೆಯೆಂದು ಖಾತ್ರಿ ಪಡಿಸಿಕೊಳ್ಳಬೇಕು. ಕಿತ್ತ ಗಿಡಗಳ ಬೇರನ್ನು, ಕಾಂಡವನ್ನು ಬೇರು ಭಾಗದಿಂದ 1-2 ಸೆಂ.ಮಿ. ಮೇಲಕ್ಕೆ ಬಿಟ್ಟು ಕತ್ತರಿಸಿ, ಪ್ರತ್ಯೇಕಿಸಿಕೊಳ್ಳಬೇಕು. ಹೀಗೆ ಬೇರ್ಪಡಿಸಿಕೊಂಡ ಬೇರುಗಳನ್ನು 10 ದಿನಗಳ ಕಾಲ ನಿರಂತರವಾಗಿ ಬಿಸಿಲಿನಲ್ಲಿ ಹರಡಿ ಒಣಗಿಸಿದ ನಂತರ ಬಿಳಿ ಪಾಲಿಥೀನ್ ಚೀಲಗಳಲ್ಲಿ ಶೇಖರಿಸಿಟ್ಟುಕೊಳ್ಳಬೇಕು.



ಕರ್ನಾಟಕದ ಗದಗ ಜಿಲ್ಲೆಯ ಹುಲಕೋಟಿ ಗ್ರಾಮದಲ್ಲಿ 120 ದಿನದ ಅಶ್ವಗಂಧ ಬೆಳೆಯು ಕೊಯ್ಲಿಗೆ ಸಿದ್ಧವಾಗಿದೆ

## ವರಮಾನ

ಒಂದು ಹೆಕ್ಟೇರ್ ಭೂಮಿಯಿಂದ ಅಶ್ವಗಂಧದ ಇಳುವರಿಯು ಸರಾಸರಿ 625-700 ಕೆ.ಜಿ. ಇರುತ್ತದೆ. ಪ್ರತಿ ಹೆಕ್ಟೇರ್‌ಗೆ ಬೀಳುವ ಸಾಗುವಳಿಯ ವೆಚ್ಚವು ರೂ.20,000 ರಿಂದ 25,000 ಮತ್ತು ಆದಾಯವು ರೂ. 92,500 ರಿಂದ 1,12,500 ಇರುತ್ತವೆ. ಅಂದರೆ, ಆಯ-ವ್ಯಯಗಳ ಅನುಪಾತವು 4.5. ಅಲ್ಪಾವಧಿಯ ಈ ಬೆಳೆಯನ್ನು ಒಂದು ಹೆಕ್ಟೇರ್ ಭೂಮಿಯಲ್ಲಿ ಕೃಷಿ ಮಾಡಲು ಮತ್ತು ಫಸಲನ್ನು ಸಂಗ್ರಹಿಸಿ ಸಂಸ್ಕರಣೆ ಮಾಡಲು 100 ಮಾನವ ದಿನಗಳಷ್ಟು ಕೆಲಸಗಾರರು ಬೇಕಾಗುತ್ತಾರೆ.




### ಎನ್‌ಎಂಪಿಬಿ - ಆರ್‌ಸಿಎಫ್‌ಸಿ (ದಕ್ಷಿಣ ವಲಯ)

ಪ್ರಾದೇಶಿಕ ಹಾಗೂ ಸಹಾಯಪ್ರದಾನ ಕೇಂದ್ರ (ದಕ್ಷಿಣ ವಲಯ), ಪೀಚಿ, ಕೇರಳ, ಇದು ರಾಷ್ಟ್ರೀಯ ಔಷಧೀಯ ಸಸ್ಯಗಳ ಮಂಡಳಿಯ (NMPB) ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಏಳು ಪ್ರಾದೇಶಿಕ ಹಾಗೂ ಸಹಾಯಪ್ರದಾನ ಕೇಂದ್ರಗಳಲ್ಲಿ ಒಂದು. NMPB ಯು ಭಾರತ ಸರ್ಕಾರದ ಆಯುಷ್ ಮಂತ್ರಾಲಯದ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ.

### Contact

NMPB Regional-cum-Facilitation Centre
(Southern Region)
Kerala Forest Research Institute
Peechi 680653, Thrissur District, Kerala, INDIA
Phone: +91 487 2690100; +91 8289995600
E-mail: rcfcsouthern@gmail.com
Website: www.rcfcsouthern.org